ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/62/2015-16. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹನುಮಂತಪ್ಪ ತಂದೆ ಲೇಟ್ ರಾಮಪ್ಪ<br>2)ಗೋವಿಂದಮ್ಮ ಗಂಡ ಲೇಟ್ ರಾಮಪ್ಪ<br>ಕೊರಚರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಯರ್ರಲಿಂಗನಹಳ್ಳಿ ಗ್ರಾಮದ ಸನಂ 251ಬಿ/1ಸಿ. ವಿಸ್ತೀರ್ಣ 4-05. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಯರ್ರಲಿಂಗನಹಳ್ಳಿ ಗ್ರಾಮದ ಸನಂ 251ಬಿ/1ಸಿ. ವಿಸ್ತೀರ್ಣ 4-05. ಎಕ್ರೆ ಜಮೀನನ್ನು ಸದರಿ ತಾಲೂಕು ಕೊರಚರಹಟ್ಟಿ ಗ್ರಾಮದ ಹನುಮಂತಪ್ಪ ತಂದೆ ರಾಮಪ್ಪ. ಇವರು ದಿನಾಂಕ 20-01-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಯರ್ರಲಿಂಗನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 09-11-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸಂಬಂಧಪಟ್ಟ ವಾರಸುದಾರರು ಪಾಲು ವಿಭಾಗ ಪತ್ರಕ್ಕೆ ಹಾಗೂ ನಮೂನೆ-21ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 05/2015-16.. ದಿನಾಂಕ 10-12-2015. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-05-2016. ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಯರ್ರಲಿಂಗನಹಳ್ಳಿ ಗ್ರಾಮದ ಸನಂ 251ಬಿ/1ಸಿ. ವಿಸ್ತೀರ್ಣ 4-05. ಎಕ್ರೆ ಜಮೀನು ನಮ್ಮ ತಾಯಿಯವರಾದ ಗೋವಿಂದಮ್ಮ ಗಂಡ ಲೇಟ್ ರಾಮಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ಸದರಿ ಜಮೀನನ್ನು ದಿನಾಂಕ 20-01-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿರುತ್ತಾರೆ. ಸದರಿ ಜಮೀನಿನಲ್ಲಿ ನನಗೆ 2-05 ಎಕ್ರೆ ಜಮೀನು ಬಂದಿರುತ್ತದೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅಳತೆ ಮಾಡಿಸಿ 11ಇ. ನಕ್ಷೆಯನ್ನು ಪಡೆದಿರುತ್ತೇನೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ.ನಕ್ಷೆಯಂತೆ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಪಾಲು ವಿಭಾಗದ ಪತ್ರದಲ್ಲಿ ಹಾಗೂ ವಂಶವೃಕ್ಷದಲ್ಲಿನ ವಾರಸುದಾರರು ಪಾಲು ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಯರ್ರಲಿಂಗನಹಳ್ಳಿ ಗ್ರಾಮದ ಸನಂ 251ಬಿ/1ಸಿ. ವಿಸ್ತೀರ್ಣ 4–05. ಎಕ್ರೆ ಜಮೀನಿನ ದಿನಾಂಕ 20–01–2015 ರ ಪಾಲು ವಿಭಾಗದಲ್ಲಿ ವಂಶವೃಕ್ಷದಲ್ಲಿನ ವಾರಸುದಾರರು ಸಹಿ ಮಾಡಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹನುಮಂತಪ್ಪ ತಂದೆ ಲೇಟ್ ರಾಮಪ್ಪ. ಗೋವಿಂದಮ್ಮ ಗಂಡ ಲೇಟ್ ರಾಮಪ್ಪ ಕೊರಚರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.